


ಅವನ ಸಹಾಯಕ್ಕೆ ಸೇರಿಕೊಂಡರು. ನೋಡು, ನೋಡುತ್ತಿದ್ದಂತೆ ಕಂಬಗಳು ಅರಮನೆಯಾದವು, ಮತ್ತೊಂದು ಸ್ವಲ್ಪ ಹೊತ್ತಿನಲ್ಲಿ ಅರಮನೆ ಗುಲಾಬಿ, ಡೈಸಿ, ಚೆಂಡು ಹೂವಿನಿಂದ ಅಲಂಕಾರಗೊಂಡಿತು.

ಪರಮೇಶ್ವರನ ಕಣ್ಣುಗಳು ಸುಜಾತಳಿಗಾಗಿ ಹುಡುಕಿತು. ಅವಳು ದೂರದಲ್ಲಿ ಪ್ಲಾಸ್ಟಿಕ್ ಚೇರಿಗೆ ಬಿಳಿ ಬಣ್ಣದ ಸ್ಯಾಟಿನ್ ಕವರ್ ಹಾಕುತ್ತಿರುವುದು ಕಾಣಿಸಿತು. ಪಾಪದ ಹುಡುಗಿ ಕಷ್ಟವನ್ನೇ ಉಂಡವಳು. ಕಷ್ಟಪಟ್ಟು ಕೆಲಸ ಮಾಡುತ್ತಾಳೆ, ಮುಗ್ಧ ಮನಸ್ಸಿನಲ್ಲಿ ಕನಸುಗಳು ಹುಟ್ಟಿಕೊಂಡಿಲ್ಲವೇ ಎಂದು ಅನಿಸಿದ್ದುಂಟು.

ತನ್ನವರೆನಿಸಿಕೊಂಡವರಿದ್ದರೂ ನನ್ನನ್ನು ನಂಬಿದ್ದಾಳೆ, ಆದರೆ ನಾನೇನೂ ಅವಳನ್ನು ನಂಬಿಸಿ ಮೋಸ ಮಾಡುತ್ತಿಲ್ಲ ಎಂದುಕೊಂಡು ಸಮಾಧಾನ ಪಟ್ಟುಕೊಂಡ.

ಬರಡು ಭೂಮಿಯಂತಿದ್ದ ರಿಸೆಪ್ಶನ್ ಹಾಲ್ ಜಗಮಗಿಸತೊಡಗಿತು. ಕುರ್ಚಿಗಳು ಪ್ಲಾಸ್ಟಿಕ್‌ನದ್ದಾಗಿದ್ದರೂ ಸ್ಯಾಟಿನ್ ಬಟ್ಟೆ ತೊಟ್ಟು ಶ್ರೀಮಂತಗೊಂಡವು. ಬಣ್ಣಬಣ್ಣದ ಆಕರ್ಷಕ ದೀಪಗಳು, ಸಿಲ್ಕ್ ಬಟ್ಟೆಗಳ ಪರದೆಗಳು, ಮಣಿಗಳ ತೋರಣ, ಗೋಡೆಗಳಿಗೆ ಗುಲಾಬಿ, ಡೈಜಿ ಹೂವಿನ ಬೊಕೆಗಳ ಅಲಂಕಾರ, ಪ್ರವೇಶ ದ್ವಾರದಲ್ಲಿ ಹೂವಿನ ಸ್ವಾಗತ ಕಮಾನು. ಬರುವ ಅತಿಥಿಗಳಿಗಾಗಿ ಸುಜಾತ